ದಿಃ **26-03-2019** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಂ ಆರ್ ಬಿ ವಾದಿ ಪರ ವಕೀಲರವರಿಂದಃ

ನಿಡಿ **24** ರಿಂದ **35** ಗಳು **2002** ರ ನಂತರದ ದಾಖಲಾತಿಗಳು ಎಂದರೆ ಸರಿ. ಸಕ್ಕರೆ ಕಾರ್ಖಾನೆಯವರು ಕಬ್ಬನ್ನು ತೆಗೆದುಕೊಳ್ಳುವ ಮುನ್ನ ಲಾವಣಿ ಸ್ಲಿಪ್ಪನ್ನು ಹೊಲದ ಮಾಲಕರಿಂದ ತುಂಬಿಸಿಕೊಳ್ಳುತ್ತಾರೆ ಎಂದರೆ ಸರಿ. ಈಗ ನಾನು ಲಾವಣಿ ಪ್ರತಿಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ರಿ.ಸ.ನಂ.**548** ರಲ್ಲಿ **6** ಹಿಸ್ಸೆಗಳು ಇವೆ. ನಿಡಿ **24** ರಿಂದ **31** ರಲ್ಲಿ ಹಿಸ್ಸಾ ನಂಬರ ಬರೆದಿಲ್ಲಾ ಎಂದರೆ ಸರಿ. ಘಟಪ್ರಭಾ ಸಕ್ಕರೆ ಕಾರ್ಖಾನೆಯಲ್ಲಿ ನನ್ನ ಯಾವುದೇ ಶೇರ ಇಲ್ಲ. ನಾನು ಸದರಿ ಸಕ್ಕರೆ ಕಾರ್ಖಾನೆಯಲ್ಲಿ ಯಾವುದೇ ತರಹದ ಮೆಂಬರ ಸಹ ಇಲ್ಲ. ಸಕ್ಕರೆ ಕಾರ್ಖಾನೆಯವರು ಕಬ್ಬು ತೆಗೆದುಕೊಂಡು ಹೋಗುವುದಕ್ಕಿಂತ ಮುಂಚೆ ಹೊಲಕ್ಕೆ ಬಂದು ಕಬ್ಬನ್ನು ಪರೀಕ್ಷಿಸಿ ಕಬ್ಬಿನ ಹಾಲಿನ ಗುಣಮಟ್ಟದ ಬಗ್ಗೆ ಒಂದು ವರದಿಯನ್ನು ಬರೆದುಕೊಂಡು ಹೋಗುತ್ತಾರೆ ಎಂದರೆ ಸರಿ. ಈ ಕುರಿತು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿ. ನಿಡಿ **24** ರಿಂದ **31** ಗಳು ದಾವಾ ಆಸ್ತಿಗೆ ಸಂಬಂಧಿಸಿದ ದಾಖಲಾತಿಗಳು ಅಲ್ಲಾ ಎಂದರೆ ಸರಿಯಲ್ಲ.

ಕೆ ಇ ಬಿ ಯವರು ದಾವಾ ಆಸ್ತಿಗೆ ವಿದ್ಯುತ್ ಸಂಪರ್ಕ ನೀಡಿದ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. **16-02-2015** ರಂದು ವಿದ್ಯುತ್ ಸಂಪರ್ಕ ಪಡೆದಿದ್ದು ಆ ಬಗ್ಗೆ ದಾಖಲಾತಿ ಹಾಜರು ಪಡಿಸಿದ್ದೇನೆ. ನಿಡಿ **32** ರಿಂದ **35** ರಲ್ಲಿ ಹೆಸ್ಕಾಂರವರಿಂದ ವಿದ್ಯುತ್ ಸಂಪರ್ಕ ಪಡೆದ ಪ್ರಮಾಣ ಪತ್ರ ಇಲ್ಲ ಎಂದರೆ ಸರಿಯಲ್ಲ. ಈ ಸಮಯದಲ್ಲಿ ದಾಖಲಾತಿಗಳನ್ನು ಸಾಕ್ಷಿದಾರನಿಗೆ ತೋರಿಸಿದಾಗ ಓದಲು ಬರುವುದಿಲ್ಲಾ ಎಂದು ಹೇಳುತ್ತಾರೆ. ಮೋಟಾರ ಪಂಪಸೆಟಗೆ ವಿದ್ಯುತ್ ಸಂಪರ್ಕ ಇರುವ ಬಗ್ಗೆ ಪ್ರಮಾಣ ಪತ್ರ ನೀಡಲು ಹೆಸ್ಕಾಂ ಗೋಕಾಕ ಕಚೇರಿಗೆ ಕೇಳಿಕೊಂಡಿದ್ದೆನು. ಆರ್ ಆರ್ ನಂ.**63003** ಇದು ರಿ.ಸ.ನಂ.**548/1** ಕ್ಕೆ ಸಂಬಂಧಿಸಿದ್ದು ಅಲ್ಲಾ ಎಂದರೆ ಸಾಕ್ಷಿಯು ರಿ.ಸ.ನಂ.**112** ರಲ್ಲಿ ಸದರಿ ಆರ್ ಆರ್ ನಂ.**63003** ಕ್ಕೆ ನೀರಿನ ಮೋಟಾರನ್ನು ನದಿಯ ದಡದಲ್ಲಿ ಕೂರಿಸಿ ರಿ.ಸ.ನಂ.**548/1** ಕ್ಕೆ ನೀರು ಹರಿಸುತ್ತೇನೆ ಎಂದು ಹೇಳುತ್ತಾರೆ. ರಿ.ಸ.ನಂ.**548/1** ರಲ್ಲಿ ಯಾವುದೇ ಮೋಟಾರ ಇಲ್ಲ ಎಂದರೆ ಸರಿಯಲ್ಲ. ಆರ್ ಆರ್ ನಂ.**63003** ಇದು ಯಾವುದಕ್ಕೆ ಸಂಬಂಧಿಸಿದ್ದು ಎಂದರೆ ಸಾಕ್ಷಿಯು ರಿ.ಸ.ನಂ.**112** ಮತ್ತು ರಿ.ಸ.ನಂ.**548/1** ಎರಡಕ್ಕೂ ಸಂಬಂಧಿಸಿದ್ದು ಎಂದು ಹೇಳುತ್ತಾರೆ. ನಾನು ಒಂದೇ ಮೋಟಾರನ್ನು ರಿ.ಸ.ನಂ.**112** ರಲ್ಲಿ ಕೂರಿಸಿದ್ದೇನೆ ಎಂದರೆ ಸರಿ. ನಾನು ಒಂದೇ ನೀರಿನ ಮೋಟಾರನ್ನು ಕೂರಿಸಿದ್ದೇನೆ. ರಿ.ಸ.ನಂ.**112** ನನ್ನ ಒಡೆತನದ ಆಸ್ತಿ ಎಂದರೆ ಸರಿ. ನಿಡಿ **32** ರಿಂದ **35** ಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುವಾಗ ಆರ್ ಆರ್ ನಂ.**63003** ಕ್ಕೆ ಕೂಡಿಸಿರುವ ನೀರಿನ ಮೋಟಾರ ರಿ.ಸ.ನಂ.**112** ರಲ್ಲಿ ಇದ್ದಿದ್ದು ನನಗೆ ಗೊತ್ತಿತ್ತು. ರಿ.ಸ.ನಂ.**112** ರಿಂದ ರಿ.ಸ.ನಂ.**548/1** ಕ್ಕೆ ನೀರಿನ ಪೈಪ ಲೈನ ಮಾಡಿಕೊಂಡು ಹೋಗಲು ಕಂದಾಯ ಇಲಾಖೆಯ ಪರವಾನಗೆ ಪಡೆದಿಲ್ಲ. ನಿಡಿ **32** ರಿಂದ **35** ಗಳು ರಿ.ಸ.ನಂ.**112** ರಲ್ಲಿನ ನೀರಿನ ಮೋಟಾರಕ್ಕೆ ತುಂಬಿದ ಪಾವತಿಗಳು ಎಂದರೆ ಸರಿ.

ನಿಡಿ **24** ರಿಂದ **31** ಗಳು ರಿ.ಸ.ನಂ.**112** ರ ಜಮೀನಕ್ಕೆ ಸಂಬಂಧಿಸಿದವು ಎಂದರೆ ಸರಿಯಲ್ಲ. ಕಬ್ಬಿನ ಬಿಲ್ಲು ಬ್ಯಾಂಕಿಗೆ ಪಾವತಿ ಆದ ಬಗ್ಗೆ ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿ. ರಿ.ಸ.ನಂ.**548/1** ರಲ್ಲಿ ವಾದಿಗಳು ಕಬ್ಜೆಯಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಾನು ರಿ.ಸ.ನಂ.**112** ರ ಕಬ್ಜೆಯಲ್ಲಿ ಇದ್ದು ಅವುಗಳ ಕುರಿತು ಇರುವ ದಾಖಲಾತಿಗಳನ್ನು ಹಾಜರು ಪಡಿಸಿ ರಿ.ಸ.ನಂ.**548/1** ರಲ್ಲಿ ಕಬ್ಜೆಯಲ್ಲಿ ಇದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

ಸಹಿ/-

(ಮೋಹನ ಸದಾಶಿವ ಪೋಳ)

**2** ನೇ ಹೆ.ದಿ.&ನ್ಯಾದಂ.,ಗೋಕಾಕ.